





# ಸುಝೋ ಗಾರ್ಡನ್

## ಯಾಂಝೆ ನದೀದಂಡೆಯಲ್ಲಿರುವ ಈ ಉದ್ಯಾನವನ 'ಚೀನಾದ ವೆನಿಸ್' ಎಂದೇ ಸುಪ್ರಸಿದ್ಧ.

■ ಚಿತ್ರ– ಲೇಖನ: **ರಮೇಶ್ ಶೆಟ್ಟಿಗಾರ್**



**ಚೀ**ನಾದ ಶಾಂಘೈ ವಿಶ್ವಪ್ರಸಿದ್ಧ ಮಹಾನಗರ. ಅಲ್ಲಿಂದ ನೂರು ಕಿ.ಮೀ ದೂರದಲ್ಲಿ ಚೀನಾದ ವೆನಿಸ್ ಎಂದೇ ಕರೆಯಲ್ಪಡುವ ಸುಝೋ ಎಂಬ ಪುರಾತನ ನಗರದಲ್ಲಿ ಹಲವು ಪ್ರೇಕ್ಷಣೀಯ ಸ್ಥಳಗಳಿವೆ. ಅವುಗಳಲ್ಲಿ 'ಹಂಬಲ್ ಅಡ್ಮಿನಿಸ್ಟ್ರೇಟರ್ಸ್ ಗಾರ್ಡನ್' ಎಂಬ ಅತ್ಯಾಕರ್ಷಕ ಪುರಾತನ ಉದ್ಯಾನವನ ಮುಖ್ಯವಾದದ್ದು.

ಚೀನಾದ ನಾಲ್ಕು ಸುಪ್ರಸಿದ್ಧ ಉದ್ಯಾನಗಳಲ್ಲಿ ಇದೂ ಒಂದು. 1997ರಲ್ಲಿ ಯುನೆಸ್ಕೋದಿಂದ 'ವರ್ಲ್ಡ್ ಹೆರಿಟೇಜ್ ಸೈಟ್' (ವಿಶ್ವ ಪಾರಂಪರಿಕ ತಾಣ) ಮಾನ್ಯತೆ ಪಡೆದಿರುವ ಈ ಗಾರ್ಡನ್, ಮಹತ್ವದ ಪ್ರವಾಸಿ ಕೇಂದ್ರ. ಈ ಉದ್ಯಾನದ ಪುರಾತತ್ವ ಸಂಸ್ಕೃತಿಯ ಅವಶೇಷಗಳನ್ನು ಕಾಪಿಟ್ಟುಕೊಂಡಿರುವುದರಿಂದ ಚೀನಾ ಸರಕಾರ ಇದಕ್ಕೆ ವಿಶೇಷ ಮಾನ್ಯತೆಯನ್ನು ನೀಡಿದೆ.

ಯಾಂಝೆ ನದಿದಂಡೆಯಲ್ಲಿರುವ 'ಹಂಬಲ್ ಅಡ್ಮಿನಿಸ್ಟ್ರೇಟರ್ಸ್ ಗಾರ್ಡನ್', ಸುಮಾರು ಐನೂರು ವರ್ಷಗಳಷ್ಟು ಹಿಂದೆ ಮಿಂಗ್ ಸಾಮ್ರಾಜ್ಯದ ಸೇವೆಯಲ್ಲಿದ್ದ ವಾಂಗ್ ಝಿಯಾಚೆಂಗ್ ಎಂಬ ಆಡಳಿತಗಾರನಿಂದ ನಿರ್ಮಿತವಾಯಿತು. ತನ್ನ ಅಧಿಕಾರಾವಧಿಯಲ್ಲಿ ಹತಾಶನಾಗಿ ಜಿಗುಪ್ಸೆ ಹೊಂದಿದ್ದ ವಾಂಗ್ ನಿವೃತ್ತಿ ಹೊಂದಿದ ಬಳಿಕ ದಾಹೋಂಗ್ ಮಂದಿರವಿದ್ದ ಜಾಗದಲ್ಲಿ ತೋಟಗಾರಿಕೆಯನ್ನು